**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ231/2020 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **07.12.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ.ಎಚ್.ಎನ್.ಬಿ.ಎನ್ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ದಿನಾಂಕ **27.02.2020** ರಂದು ಬನ್ನೂರು ಪುರಸಭೆಯವರು ನೀಡಿರುವ ನೋಟಿಸನನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ಸದರಿ ನೋಟಿಸಿಗೆ ದಿನಾಂಕ **20.03.2020** ರಂದು ನೀಡಿರುವ ಪ್ರತ್ಯುತ್ತರವನ್ನು ನಿಪಿ-**2** ಎಂದು, ದಿನಾಂಕ **28.08.2020** ರಂದು ಬನ್ನೂರು ಪುರಸಭೆ ಮುಖ್ಯಾಧಿಕಾರಿಯವರು ನೀಡಿರುವ ತಿಳುವಳಿಕೆ ಪತ್ರವನ್ನು ನಿಪಿ-**3** ಎಂದು, ದಿನಾಂಕ **29.05.2020** ರಂದು ಪುರಸಭೆಯ ಸಾರ್ವಜನಿಕ ಮಾಹಿತಿ ಅಧಿಕಾರಿಯವರು ನೀಡಿರುವ ಪತ್ರವನ್ನು ನಿಪಿ-**4** ಎಂದು, **8** ನೇ ವಾರ್ಡನ ನಕ್ಷೆಯ ದೃಢೀಕೃತ ನಕಲನ್ನು ನಿಪಿ-**5** ಎಂದು, ಆಸ್ತಿ ತೆರಿಗೆ ಪಾವತಿ ರಸೀದಿಯನ್ನು ನಿಪಿ-**6** ಎಂದು, ಒಂದು ಕಚ್ಚಾ ನಕ್ಷೆಯನ್ನು ನಿಪಿ-**7** ಎಂದು, ಆರು ಫೋಟೊಗಳನ್ನು ನಿಪಿ-**8** ರಿಂದ ನಿಪಿ-**13** ಎಂದು, ಒಂದು ಸಿ.ಡಿಯನ್ನು ನಿಪಿ-**14** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**